ಕೂಡಿಡುವುದರಲ್ಲಿ ಆಳುಗಳು ದುಡಿಯುತ್ತಿದ್ದರು.

ಒಣಗಿದ ಅಡಿಕೆ ಸಿಪ್ಪೆಗಳನ್ನು ಬಚ್ಚಲೊಲೆಗೆ ತುಂಬಿ ಒಂದು ಕೆಂಡ ಹಾಕಿಟ್ಟರೆ ಬೆಳಗಾಗುವಷ್ಟರಲ್ಲಿ ಅವು ನಿಧಾನಕ್ಕೆ ಉರಿದು ದೊಡ್ಡ ಹಂಡೆ ತುಂಬಾ ಬಿಸಿ ನೀರು. ಏನಿದ್ದರೂ ಮಳೆಗಾಲದ್ದೇ ರಗಳೆ. ದಿನಾ ಗುಡ್ಡ ಹತ್ತಿ ಕಾನಿಗೆ ಹೋಗುವ ಆಳುಗಳೊಡನೆ ಎಳೆ ಬಸುರಿ ಸೀತಾಲಕ್ಷ್ಮಿ ಒಂದು ಬಯಕೆ ಮುಂದಿಟ್ಟಿದ್ದಳು. ಸಿಹಿ, ಒಗರಿನ ನೇರಳೆಹಣ್ಣು ತಿನ್ನುವ ಬಯಕೆ. ಬಸುರಿ ಬಾಯ್ಬಿಟ್ಟು ಕೇಳಿದ ಮೇಲೆ ಅದನ್ನು ಪೂರೈಸದೆ ಇರುವವರು ಯಾರು? 'ಬಯಕೆ ಪೂರೈಸದಿದ್ದರೆ ಹುಟ್ಟುವ ಮಗುವಿಗೆ ಕಿವಿ ಸೋರುತ್ತದೆ' ಎನ್ನುವುದು ವಾಡಿಕೆ ಮಾತು. ಈ ಬಗ್ಗೆ ಆಳುಮಕ್ಕಳು ತಲೆ ಕೆಡಿಸಿಕೊಳ್ಳುವ ಪ್ರಮೇಯ ಏನಿಲ್ಲ. ಆದರೆ ಸೀತಾಲಕ್ಷ್ಮಿಯನ್ನು ಕಂಡರೆ ಎಲ್ಲರಿಗೂ ಒಂದು ವಿಶೇಷ ಗೌರವ. ವಿಶ್ವಾಸ. ಇದಕ್ಕೆ ಕಾರಣ ಕೂಡಾ ಇತ್ತು. 'ಒಂಚೂರು ಮಜ್ಜಿಗೆ ನೀರಿದ್ರೆ ಕೊಡಿನಿ...' ಎನ್ನುತ್ತಾ ಹಿತ್ತಲ ಬಾಗಿಲಲ್ಲಿ ನಿಂತು ಮುಖದ ಬೆವರು ಒರೆಸಿಕೊಳ್ಳುವವರಿಗೆ ಸೀತಾಲಕ್ಷ್ಮಿ ಮಜ್ಜಿಗೆಗೆ ನೀರು ಹುಯ್ದುಕೊಟ್ಟು 'ಆಯ್ತು' ಅನ್ನಿಸುತ್ತಿರಲಿಲ್ಲ. ಮಜ್ಜಿಗೆ ನೀರಿಗೆ ಖಾರಕ್ಕೆ ಒಂದೇ ಒಂದು ಜೀರಿಗೆ ಮೆಣಸು, ಚೂರು ಇಂಗು, ಉಪ್ಪು ಬೆರೆಸಿ ರಸನೇಂದ್ರಿಯಕ್ಕೆ ಸೊಗಸುವಂತೆ ಮಾಡಿಕೊಡುತ್ತಿದ್ದಳು. ತೋಟದಿಂದ ತಂದ ಲಿಂಬೆಹಣ್ಣು ಇದ್ದರೆ ಅದನ್ನೂ ಒಂದು ಹೋಳು ಹಿಂಡಿ ಬಿಸಿಲಲ್ಲಿ ದುಡಿದು ಬಂದವರಿಗೆ ಲೊಟ್ಟೆ ಹೊಡೆದು ಕುಡಿಯುವಂತಾ ಸೊಗಸು. ನೀರು ಕುಡಿಯಲು ಬೆಲ್ಲ ಕೇಳಿಕೊಂಡು ಬರುವವರಿಗೆ ಇಡೀ ಒಂದುಂಡೆ ಬೆಲ್ಲ, 'ಜಡ ಹತ್ತಿ ನಾಲಿಗೆ ರುಚಿ ಕೆಟ್ಟಿದೆ' ಅನ್ನುವವರಿಗೆ ಕರಟದ ತುಂಬಾ ಮಾವಿನಮಿಡಿ ಉಪ್ಪಿನಕಾಯಿ, 'ಸಣ್ಣಮ್ಮನ ಕೈ ದೊಡ್ಡದು' ಎಂದು ಆಳುಗಳಲ್ಲಿ ಪ್ರಚಾರವಾಗಿತ್ತು.

ಮುಂಚೆ ಇದರ ಮೇಲ್ವಿಚಾರಣೆ ವಹಿಸಿಕೊಂಡವರು ಕೊಡುತ್ತಿರಲಿಲ್ಲ ಅಂತಲ್ಲ, ಆದರೆ ಸೀತಾಲಕ್ಷ್ಮಿಯಂತೆ ಮುತುವರ್ಜಿಯಿಂದ ಕೊಡುವ ಉಮೇದು ಅವರಿಗಿರಲಿಲ್ಲ. ಅವರ ಲೆಕ್ಕದಲ್ಲಿ ಮನೆಯ ಕೆಲಸದಾಳುಗಳು ಅಂದರೆ ಪ್ರತ್ಯೇಕ. ತಮ್ಮಂತೆ ಅವರೂ ನರಮನುಷ್ಯರ ಜಾತಿಗೆ ಸೇರಿದವರು ಎಂದು ಯಾರೂ ಯೋಚಿಸುತ್ತಿರಲಿಲ್ಲ. ಬಡತನ ಅನುಭವಿಸಿ ಬೆಳೆದವಳಾದ್ದರಿಂದ ಅವಳಿಗೆ ಬಡತನ ಅಂದರೆ ಏನೆಂದು ಗೊತ್ತಿದೆ. ಅದರಿಂದುಂಟಾಗುವ ದೈನ್ಯದ ಅರಿವಿದೆ. ಅಲ್ಪವನ್ನು ಮಹತ್ತಾಗಿ ಸ್ವೀಕರಿಸುವ ದೈನ್ಯತಾಭಾವದ ಕುರಿತು ಸಹಾನುಭೂತಿ ಇದೆ. ಅವಳೇನು ದುಡ್ಡು ಕೊಟ್ಟು ಕೊಂಡು ತರಬೇಕಾ? ಕೊಟ್ಟಿಗೆಯಲ್ಲಿನ ಕರಾವು ಮನೆ ಜನರಿಗೆ ಹೆಚ್ಚೆಚ್ಚು ಅನಿಸುವಷ್ಟಿದೆ. ವಾರಕ್ಕೆ ಒಂದು ದಿನ ಹೊರತುಪಡಿಸಿ ದಿನಾ ಹೆಪ್ಪು ಹಾಕಿ ಕಡೆಯುವ ಮಜ್ಜಿಗೆ ತಪ್ಪಲೆ ತುಂಬಾ ಇರುತ್ತದೆ. ಉಳಿದಿದ್ದನ್ನು ಕಲಗಚ್ಚಿನ ಬಾನಿಗೆ ಸುರಿಯುವುದಕ್ಕಿಂಥ ಆಸೆ ಮಾಡಿ ಕುಡಿಯುವವರಿಗೆ ಕೊಟ್ಟರೆ ಪುಣ್ಯ ಎಂದು ಅವಳ ನಂಬಿಕೆ. ತಿಳಿವಳಿಕೆ. ತಾನೇ ಕೈಯಾರೆ ಅಡಿಕೆಹೋಳು ಕೊಡುವುದಾದಲ್ಲಿ ಎರಡು ಹೋಳು ಹೆಚ್ಚೇ ಕೊಟ್ಟಾಳು. ಕೆಲಸದ ಕೊನೆಯಲ್ಲಿ ಆಳುಗಳಿಗೆ ಸೇರಕ್ಕಿ ಅಳೆದು ಕೊಡುವಾಗ ತಲೆ ಕೀಸದೆ ಹಾಗೇ ಉಳಿಸಿಯಾಳು. ಅತ್ತಿಗೆಯ ಧಾರಾಳತನ ವೆಂಕಟರಾಮನಿಗೆ ಗೊತ್ತಿದೆ. 'ಅಣ್ಣಂಗೆ ಗೊತ್ತಾದ್ರೆ ಉಂಟು ಹಬ್ಬ...' ಎಂದು ಸುಳ್ಳೇ ಹೆದರಿಸುತ್ತಾನೆ ಅವನು.

'ಅಷ್ಟೆಲ್ಲಾ ಉಳಿಸಿ ಮನೇಮೇಲೆ ಮತ್ತೊಂದು ಉಪ್ಪರಿಗೆ ಎಬ್ಬಿಸ್ಬೇಕಂತಾ? ಈಗಿರೋ ಮನೇನೇ ಗುಡಿಸಿ, ಸಾರಿಸೋ ಹೊತ್ತಿಗೆ ಸೊಂಟ ಬಿದ್ದು ಹೋಗುತ್ತೆ. ಕಟ್ಟಿಸೋದಾದ್ರೆ ಹೊಸ ಮನೆ ಕಟ್ಟಿಸೋಕೆ ಹೇಳು ನಿಮ್ಮಣ್ಣಂಗೆ...'

'ನಾನ್ಯಾಕೆ ಮಧ್ಯಸ್ಥಿಕೆ ಮಾಡ್ಲಿ? ಹೇಳಿ ನೀವೇ...'

'ಅಯ್ಯಯ್ಯಪ್ಪಾ, ನಿಮ್ಮಣ್ಣನ ಸಾವಾಸ ಬೇಡ...'

ಸೀತಾಲಕ್ಷ್ಮಿ ಹೇಳಿದ್ದು ಸುಳ್ಳೇನಲ್ಲ. ಕಡಿಮೆ ಅಂದರೂ ಅರವತ್ತೆಪ್ಪತ್ತು ವರ್ಷ ಕಂಡ ಹಳೇ ಮನೆ. ಇಂತಿಂಥಾ ದಪ್ಪದ ಮಣ್ಣಿನ ಗೋಡೆಗಳು. ಅಗತ್ಯ ಅನಿಸಿದಾಗ ಮತ್ತಿನ್ನಷ್ಟು ಸೇರಿಸಿಕೊಳ್ಳುತ್ತಾ ಒಂದು ಅಂದ ಇಲ್ಲ, ಆಯ ಇಲ್ಲ. ಆದರೂ ಗಟ್ಟಿಮುಟ್ಟಾಗಿ ಇದೆ ಮನೆ. ನಡುಹಗಲಲ್ಲೂ ಕತ್ತಲು ಕತ್ತಲಾಗಿರುವ ಒಳಗುಗಳು, ಕೋಣೆಗಳು. ಅಲ್ಲಲ್ಲಿ ಗೋಡೆ ದೊಗರು ಬಿದ್ದು ಇಲಿ, ಹೆಗ್ಗಣಗಳು ಸೇರಿಕೊಳ್ಳುವ ದೋರುಗಳು. ಮುಟ್ಟಾದಾಗ ಸೀತಾಲಕ್ಷ್ಮಿಯ ಪಾಡು ನೋಡಬೇಕು. ಹೊರಗೆ ಕಡಿಮಾಡಿನ ಮುಟ್ಟಿನ ಕೋಣೆಯಲ್ಲಿ ಒಬ್ಬಳೇ ಮಲಗುವುದೆಂದರೆ ಜೀವ ಬಾಯಿಗೆ ಬಂದ ಅನುಭವ. ಕಣ್ಣಿಗೆ ಬೆರಳಿಟ್ಟು ತಿವಿದರೂ ಕಾಣದಷ್ಟು ಕಗ್ಗತ್ತಲು. ಕಡಿಮಾಡಲ್ಲಿ ಇಲಿಗಳು ಓಡಾಡುವ, ಕಿಚಿಪಿಚಿಗುಟ್ಟುವ ಸದ್ದು. ಹಾವು ಗೀವು ಮನೆ ಹೊಕ್ಕಿರಬಹುದೇ ಎನ್ನುವ ಅನುಮಾನದ ಜೊತೆ ಭೂತ ಪ್ರೇತಗಳ ದಿಗಿಲು. ಕಮಲಾ ಉದ್ದೇಶಪೂರ್ವಕವಾಗಿ ಹೇಳುವುದಿರಲಿಕ್ಕಿಲ್ಲ, ಆದರೆ ಅಂಥ ಕಥೆಗಳನ್ನು ರಸವತ್ತಾಗಿ ಹೇಳುವುದೆಂದರೆ ಅವಳಿಗೆ ಭಾರೀ ಉಮೇದು. ಜೋರು ನಿದ್ದೆ ಹತ್ತಿದಾಗ ಉಸಿರಾಡಲೂ ಆಸ್ಪದ ಕೊಡದೆ ಬಿಗಿದಪ್ಪುವ ಗಂಡನ ಕುರಿತು ಹೇಳುವಾಗ ಅವಳ ದನಿ ತಗ್ಗುತ್ತದೆ. 'ಇಂಥಾ ತರ ಅಂತಿಲ್ಲ. ಕೂಗೋಕೆ ಹೋದ್ರೆ ದನಿ ಹೊರಡಲ್ಲ. ಮಗ್ಗುಲು ತಿರುಗೋಣ ಅಂದ್ರೆ ಹಂದೋಕಾಗಲ್ಲ. ಧೃತರಾಷ್ಟ್ರ ಭೀಮಸೇನನ ಪ್ರತಿಮೇನ ಅಪ್ಪಿಕೊಂಡಿದ್ದು ಸುಳ್ಳು, ಇದು ಬದ್ಧ. ಹಿಂಡಿ ಹಿಪ್ಪೆ ಮಾಡುವಷ್ಟು ಬಿಗಿ. 'ಇನ್ನು ಸತ್ತೆ' ಅಂದ್ಕಂಡಿರ್ತೀನಿ. ಇದ್ದಕ್ಕಿದ್ದ ಹಾಗೆ ಬಿಗಿ ಸಡಿಲಾಗುತ್ತೆ. ಉಸಿರು ವಾಪಸು ಬರುತ್ತೆ. ಕನಸು ಬಿದ್ದಿದ್ದಾ ಅಂತ ನಂಗೇ ಅನುಮಾನ ಬರುತ್ತೆ. ಆದರೆ ಕನಸಲ್ಲ ಕಣೇ, ಸತ್ಯಕ್ಕಾರೂ...'

'ಅದು ಅವರೇ ಅಂತ ಹ್ಯಾಗೆ ಗೊತ್ತಾಗುತ್ತೆ ನಿಮಗೆ?'

'ಅದೆಲ್ಲಾ ಮಾತಲ್ಲಿ ಹೇಳೋಕಾಗಲ್ಲ. ಹಂಗನ್ನುತ್ತೆ ಅಷ್ಟೇ...'

ಕಮಲನ ಬೊಕ್ಕಣದಲ್ಲಿ ಅವೆಷ್ಟು ಭೂತಪ್ರೇತಗಳ ಕತೆಗಳಿವೆ ಅಂದರೆ ಕೇಳುವಾಗ ರೋಮಾಂಚನ. ಒಂಟೊಂಟಿಯಾಗಿ ರಾತ್ರಿ ಬಚ್ಚಲುಮನೆಗೆ ಹೋಗಬೇಕೆಂದರೆ ಪ್ರಾಣಭಯ. ಗಂಡನನ್ನು ಎಬ್ಬಿಸಲು ಮನಸ್ಸಾಗದೆ ಒತ್ತಿ ಬರುವುದನ್ನು ತಡೆದುಕೊಂಡು 'ಇನ್ನು ಸಾಧ್ಯಾನೇ ಇಲ್ಲ. ಹಾಸಿಗೆ ಒದ್ದೆಯಾಗುತ್ತೆ' ಎನ್ನುವಂತಾದರೆ ಮಾತ್ರ ಶಿವರಾಮನನ್ನು ಎಬ್ಬಿಸಿ, 'ಎಷ್ಟೊಳ್ಳೇ ಕನಸು ಬೀಳ್ತಿತ್ತು. ಅನ್ಯಾಯಾಗಿ ಹಾಳು ಮಾಡ್ದಿ. ಬಚ್ಚಲಿಗೆ ಹೋಗೋಕೆ ಜೊತೆಗೊಂದು ಜನ ಬೇಕಾ?' ಎಂದು ಬೈದುಕೊಂಡು ಅವನು ಹಿಂದೆ ಬರುತ್ತಿದ್ದ. ರಾತ್ರಿ ಹೆದರಿಕೆ ಹುಟ್ಟಿಸುತ್ತಿದ್ದ ಮನೆ ಬೆಳಗಿನ ಹೊತ್ತು ಏನೂ ಅರಿಯದ ಶಿಶು ಕಂದನಂತೆ ಕಾಣಿಸುತ್ತಾ, 'ಥೋ, ಅದೆಂತಕ್ಕೆ ಇಷ್ಟು ಹೆದರಿ ಸಾಯ್ತೀನಿ?' ಎಂದು ತನ್ನನ್ನೇ ಬೈದುಕೊಂಡಿದ್ದಿದೆ. 'ಹೆದರಿಸಿಟ್ಟು ಬಿಡ್ತಾರೆ ಅತ್ತಿಗೆ' ಎಂದು ಕಮಲಕ್ಕನ ಮೇಲೆ ಸಿಟ್ಟು ಬಂದಿದ್ದಿದೆ. ರಾತ್ರಿಯಾಯಿತೆಂದರೆ ಮತ್ತದೇ ಭಯ. ಕಿಟಕಿ ತೆಗೆದಿಟ್ಟಿದ್ದರೆ ಹಣಿಕಿ ನೋಡುವ, ರಾತ್ರಿ ಓಡಾಡುವ ಎತ್ತಿನ ಗಾಡಿಗಳ ಎದುರು ನೆಲದಿಂದ ಆಕಾಶದವರೆಗೆ ಉದ್ದಾನುದ್ದಕ್ಕೆ ನಿಂತು ಅಡ್ಡ ಹಾಕುವ. ಸೊಂಟಕ್ಕೆ ಸುತ್ತಿನ ಸೀರೆ ಸುತ್ತಿಕೊಂಡ, ಚಾಚಿದ ಕಾಲನ್ನು ಒಲೆಯೊಳಗಿಟ್ಟು ಸೌದೆಸೀಳಿನಂತೆ ಉರಿಸುತ್ತಾ ಅಡುಗೆ ಮಾಡುವ ನಾನಾ ನಮೂನಿಯ ದೆವ್ವ, ಭೂತಗಳ ಕನವರಿಕೆ. ಗಂಡನ ಮಗ್ಗುಲಲ್ಲಿ ಮಲಗಿದಾಗ ಅವನ ಜನಿವಾರದ ಭಯದಿಂದ ಯಾವೊಂದೂ ಹತ್ತಿರ ಸುಳಿಯುವುದಿಲ್ಲವೆನ್ನುವ ನಂಬಿಕೆ. ಮುಟ್ಟಿನ ಮನೆಯಲ್ಲಿ ಒಂಟಿಯಾಗಿ ಮಲಗಿದಾಗ ಕತೆಗಳಿಗೆ ಜೀವ ಬಂದುಬಿಡುತ್ತಿತ್ತು. ಸುತ್ತ ನಾಲ್ಕೂ ಕಡೆಗಳಿಂದ ಕಾಣದ ಕಣ್ಣುಗಳು ದುರುಗುಟ್ಟುವಂತೆನಿಸಿ ಬೆವೆತು ನೀರಾಗುತ್ತಿದ್ದಳು ಹುಡುಗಿ. ಕಮಲನನ್ನು ಕೋಣೆಯಲ್ಲಿ ಮಲಗಲು ಕರೆಯಬಹುದು. ಆದರೆ ಕರೆಯುತ್ತಿರಲಿಲ್ಲ. ತನ್ನ ಕೋಣೆಯಲ್ಲಿ ಒಬ್ಬಂಟಿಯಾಗಿ ಮಲಗುವ ಕಮಲನಿಗೆ ಇಲ್ಲಿ ಮಲಗಲು ಇಷ್ಟವಾಗುತ್ತದೆಯೋ, ಇಲ್ಲವೋ ಎನ್ನುವ ಶಂಕೆ.

'ಮನೆಯೊಳಗೆ ಮಲಗೋಕೆ ಅದೆಂಥಾ ಹೆದರಿಕೆ ಮಾರಾಯ್ತೀ? ಕುರ್ಕ ಹೊತ್ಕಂಡ್ಹೋಗುತ್ತಾ?' ಎನ್ನುವ ಮಾತು ಬಂದರೆ ಮರ್ಯಾದೆಗೆ ಸಾಕಲ್ಲ? ಅದೊಂಥರಾ ಸ್ವಾಭಿಮಾನ. ಅದೊಂಥರಾ ತೋರಿಕೆಯ ಧೈರ್ಯ. ಮುಟ್ಟು ನಿಂತು ಬಸುರಿಯಾದಾಗ ಸೀತಾಲಕ್ಷ್ಮಿಗೆ 'ಸದ್ಯ ಒಂಟಿಯಾಗಿ ಮಲಗುವ ತಾಪತ್ರಯ ತಪ್ಪಿತಲ್ಲಾ...' ಅನಿಸಿದ್ದು ಕ್ಷುಲ್ಲಕ ಕಾರಣವಾದರೂ ಹಾಗೆನಿಸಿದ್ದಂತೂ ಹೌದು. ಮುಸುಕು ಹೊದ್ದು ಬೆವರುತ್ತಾ ಮಲಗಿ ಗಳಿಗೆ ಲೆಕ್ಕ ಮಾಡಬೇಕಾದ್ದಿಲ್ಲ. ಬೆಳಗಾಗುತ್ತಾ ಬಂತು ಅಂತ ಗೊತ್ತಾದಾಗ ಅದೆಷ್ಟು ಸಮಾಧಾನವಾಗುತ್ತಿತ್ತು ಅಂದರೆ ದೂರ ನಿಂತು ಆಟವಾಡಿಸಿದ ನಿದ್ರೆ ಒದ್ದುಕೊಂಡು ಬಂದು ಕಣ್ಣೆವೆಗಳ ಮೇಲೆ ಅಮರಿಕೊಳ್ಳುತ್ತಿತ್ತು. ಬೆಳಿಗ್ಗೆ ಬೇಗ ಎದ್ದು ಕಾಫಿ ತಪ್ಪಲೆ ಒಲೆಯ ಮೇಲಿಟ್ಟ ಅತ್ತೆ ಮಜ್ಜಿಗೆ ಕಡೆಯುವ ಸರಬರ ಸದ್ದು ಅರೆಪ್ರಜ್ಞಾವಸ್ಥೆಯಲ್ಲಿ ಕಿವಿಯ ಮೇಲೆ ಬೀಳುವಾಗ ಅದೆಂತಾ ಸಮಾಧಾನ, ಸುಖ. ಪುಣ್ಯಾತ್ಗಿತ್ತಿ ಕಮಲತ್ತಿಗೆ ಮತ್ತೊಂದು ಮಾತನ್ನು ಕಿವಿಗೆ ತುಂಬಿದ್ದರು. ಮಧ್ಯರಾತ್ರಿ ಹನ್ನೆರಡಕ್ಕೆ ಭೂತ ದೆವ್ವಗಳ ಕಾರುಬಾರು ಶುರು. ಮೂರು ಗಂಟೆಗೆ ಮುಕ್ತಾಯ.

(ಸಶೇಷ)